ಸುತ್ತೋಲೆ ಹೊರಡಿಸಿದ್ದರು. ಇಂಥ ಸುಸಮಯಗಳಿಗೆ ಕಾಯುತ್ತಿದ್ದ ಸರ್ಕಾರಿ ನೌಕರರು ತಮ್ಮ ಸೇವೆಯ ರೇಟುಗಳನ್ನು ಹೆಚ್ಚಿಸಿಕೊಂಡು ಹಗಲು ರಾತ್ರಿ ದಣಿವರಿಯದೆ ದುಡಿದರು.

'ಅಬ್ರಕಡಬ್ರ' ಮಾಲ್‌ನಲ್ಲಿದ್ದ ಸಭಾಂಗಣವು ಸವಿಸ್ತಾರವಾಗಿದ್ದು, ವೈಭವೋಪೇತವಾಗಿತ್ತು. ಇಡೀ ನಗರಕ್ಕೇ ದೊಡ್ಡ ಕಟ್ಟಡವಾಗಿದ್ದ ಅದು ಹವಾನಿಯಂತ್ರಿತವಾಗಿತ್ತು. ಅಲ್ಲಿದ್ದ ಕುರ್ಚಿ, ಟೇಬಲ್ಲು, ಕಿಟಕಿ ಬಾಗಿಲು ಪರದೆಗಳು, ನೆಲಹಾಸು, ದೊಡ್ಡ ದೊಡ್ಡ ಶಾಂಡೆಲಿಯರುಗಳು ಬಡತನವನ್ನು ಅಣಕಿಸುವಂತೆ ಶ್ರೀಮಂತವಾಗಿದ್ದವು. ಅಲ್ಲಿನ ಭಾಷೆ ಇಂಗ್ಲಿಷ್‌ಮಯವಾಗಿತ್ತು. ಇಡೀ ಸಭಾಂಗಣವೇ ಝಗಮಗಿಸುವ ಬೆಳಕಿನಿಂದ ಕೂಡಿದ್ದು ಜನಸಾಮಾನ್ಯರೆಂದೂ ಮೂಸಿರದ ಮಂದ ಪರಿಮಳದಿಂದ ತುಳುಕುತ್ತಿತ್ತು. ಬಡ ಜೋಡಿಗಳು ನಿಂತರೂ, ಓಡಾಡಿದರೂ, ಮಾತಾಡಿದರೂ, ಮೌನವಾಗಿದ್ದರೂ ಆ ಜಾಗಕ್ಕೆ ಸಲ್ಲದಂತೆ ನಿಕೃಷ್ಟವಾಗಿ ಕಾಣುತ್ತಿದ್ದರು. ಬಡತನ, ಸರಳತೆ, ಸಹಜತೆಗಳು ಮನುಷ್ಯನ ಮಹಾಪಾತಕದಂತೆ ಕಾಣುತ್ತಿದ್ದವು. ಇಷ್ಟು ಸಾಲದೆಂಬಂತೆ ವಯಸ್ಸಿನಲ್ಲಿ ಹಿರಿಯರಾದ ಜೋಡಿಗಳನ್ನು ಅಲ್ಲಿ ಯಾರೂ ಕಡೆಗಣ್ಣಿನಿಂದಲೂ ನೋಡದೆ ಕಡೆಗಣಿಸಿದರು. ಅನೇಕ ಕೆಳ ಮಧ್ಯಮವರ್ಗದ ಜೋಡಿಗಳು ಶ್ರೀಮಂತರನ್ನು ನಕಲು ಮಾಡಲು ಎಂಥೆಂಥವೋ ಬಟ್ಟೆ ಧರಿಸಿ, ಬಾರದ ಇಂಗ್ಲಿಷಿನಲ್ಲಿ ಮಾತನಾಡಲು ತಿಣುಕುತ್ತ ನಕಲಿಶ್ಯಾಮರಂತೆ ಕಾಣುತ್ತಿದ್ದರು. ಅನೇಕರು ಹತ್ತಿಪ್ಪತ್ತು ಸಾವಿರಕ್ಕೂ ಮೇಲ್ಪಟ್ಟು ದುಡ್ಡು ಕೊಟ್ಟು ಮೇಕಪ್ಪು ಮಾಡಿಸಿಕೊಂಡಿದ್ದರು. ಕೆಲವರಂತೂ ನೆಲದ ಮೇಲೆ ಕಾಲೂರಲೂ ಮುಜುಗರಪಡುತ್ತಿದ್ದರು.

ಕಾರ್ಯಕ್ರಮ ನಡೆಸಿಕೊಡಲು ಆಹ್ವಾನಿಸಿದ್ದ ಪ್ರಸಿದ್ಧ ನಟ ನಟಿಯರು ಆಗಮಿಸಿದರು. ಅವರಿಗೆ ಯಾವ ದೇವಾನುದೇವತೆಯರಿಗೂ ಸಿಗದ ಸ್ವಾಗತವು ಸಿಕ್ಕಿತು. ಅಲ್ಲಿ ನೆರೆದಿದ್ದವರಲ್ಲಿ ಅನೇಕ ಮಂತ್ರಿಮಹೋದಯರಿದ್ದರು. ರಾಜ್ಯಮಟ್ಟದ ಅನೇಕ ಅಧಿಕಾರಿಗಳು ವಿನಾಕಾರಣ ಅವರಿಗೆ ಡೊಗ್ಗು ಸಲಾಮು ಹೊಡೆಯುತ್ತ ತಮ್ಮ ಗುಲಾಮತನವನ್ನು ಪ್ರದರ್ಶಿಸುತ್ತಿದ್ದರು. ಮಾಲನ್ನು ಸುತ್ತುವರೆದು ಪೊಲೀಸ್ ಪಡೆ ಕಾವಲಿತ್ತು.

ಕೊನೆಗೊಮ್ಮೆ ಸಕತ್ ಸತಿಪತಿಗಳ ನಿರ್ಣಯದ ಹೊತ್ತು ಬಂದೇ ಬಿಟ್ಟಿತು. ಸಭಾಂಗಣದಲ್ಲಿ ಸ್ಪರ್ಧಾಳುಗಳು ಕಂಪಿಸುತ್ತ ಎದೆ ಹಿಡಿದುಕೊಂಡು ತಮ್ಮನ್ನು ತಾವೇ ಶಾಂತಗೊಳಿಸಿಕೊಳ್ಳುತ್ತ ಉಸಿರಾಟವನ್ನು ತಹಬಂದಿಗೆ ತಂದುಕೊಳ್ಳುತ್ತ ನಿಂತಿದ್ದರು. ಒಲಿಂಪಿಕ್ಸ್‌ನ 100 ಮೀಟರ್ ಓಟದ ಪಂದ್ಯಕ್ಕೆ ನಿಂತ ಕ್ರೀಡಾಪಟುವಿಗಿಂತ ಹೆಚ್ಚಾಗಿ ಇವರ ಗುಂಡಿಗೆಗಳು ಬಡಿದುಕೊಳ್ಳುತ್ತಿದ್ದವು. ನೆರೆದಿದ್ದ ನೂರಾರು ಜೋಡಿಗಳಲ್ಲಿ ಕೇವಲ ಮೂರು ಜೋಡಿಗಳಿಗೆ ಬಹುಮಾನ ಮತ್ತು ಸಮಯವಾದರೆ ಮಾತ್ರ ಮತ್ತೊಂದು ಜೋಡಿಗೆ ಅವಕಾಶವಿದೆ ಎಂದು ಘೋಷಣೆಯಾಗಿತ್ತು. ಮಿಕ್ಕ ನೂರಾರು ಜೋಡಿಗಳು ಬರಿಗೈಯ್ಯಲ್ಲಿ ಮನೆಗೆ ಹೋಗಬೇಕೆಂಬುದನ್ನು ಅವರಾರೂ ಗಮನಕ್ಕೇ ತಂದುಕೊಂಡಿರಲಿಲ್ಲ. ಬರಲಿರುವ ರಾಶಿಗಟ್ಟಲೆ ದುಡ್ಡು ಮತ್ತು ಸರಕುಗಳ ಭ್ರಮೆಯಲ್ಲಿದ್ದರು. ಜೊತೆಯಲ್ಲಿದ್ದ ಸಹಸ್ಪರ್ಧಿಗಳ ಬಗ್ಗೆ ಅವರು ದ್ವೇಷ ಹಾಗೂ ಮತ್ಸರಗಳನ್ನು ತುಂಬಿಕೊಂಡಿದ್ದರು.

ಬಹುಮಾನಗಳು ತಮಗೇ ಬರಲಿ ಎಂದು ನೆನಪಾದ ದೇವರುಗಳನ್ನೆಲ್ಲ ಬೇಡಿಕೊಂಡಿದ್ದರು. ಮನೆಯಲ್ಲಿ ವಿಶೇಷ ಪೂಜೆಗಳನ್ನು ಮಾಡಿಸಿದ್ದರು. ಯಾವ ದಿಕ್ಕಿನಲ್ಲಿ ಕೂಡಬೇಕು, ನಿಲ್ಲಬೇಕು, ಮಲಗಬೇಕು ಎಂಬುದನ್ನೆಲ್ಲ ಜ್ಯೋತಿಷಿಗಳಿಂದ ತಿಳಿದು ಹಾಗೆಯೇ ಮಾಡುತ್ತಿದ್ದರು.

ಒಬ್ಬ ಜ್ಯೋತಿಷಿ ಪೂರ್ವ ದಿಕ್ಕಿಗೆ ಮುಖ ಮಾಡಿ ಕುಳಿತುಕೊಳ್ಳಲು ಹೇಳಿದ್ದ. ಆದರೆ, ಸಭಾಂಗಣದಲ್ಲಿ ಪಶ್ಚಿಮಕ್ಕೆ ಮುಖ ಮಾಡಿ ಕುಳಿತುಕೊಳ್ಳಬೇಕಾಗಿತ್ತು. ಆದುದರಿಂದ ಹತ್ತಾರು ಜೋಡಿಗಳು ಕುರ್ಚಿ ಬಿಟ್ಟು ನೆಲದ ಮೇಲೆ ಪೂರ್ವಕ್ಕೆ ತಿರುಗಿ ಕುಳಿತುಬಿಟ್ಟರು. ವೇದಿಕೆಯ ಮೇಲೆ ಕಣ್ಣಿಟ್ಟು ನೆಲವನ್ನು ನೋಡದೆ ನಡೆಯುತ್ತಿದ್ದ ಕೆಲವರು ಕುಳಿತಿದ್ದವರನ್ನು ಎಡವಿ ಬಿದ್ದುಬಿಟ್ಟರು. ಅವರ ಮೇಕಪ್ಪು ಎಕ್ಕುಟ್ಟಿ ಹೋಯಿತು.

